**ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

# ಸಿ.ಸಿ. ನಂ. 2279/2021

ಫಿರ್ಯಾದುದಾರರು ಗ್ರಾಮಾಂತರ ಪೊಲೀಸ್, ಸಾಗರ.

ವಿರುದ್ಧ

ಆರೋಪಿತರುಃ- ನವೀನ ಮತ್ತು ಇತರರು.

1 ನೇ ಆರೋಪಿತನ ಹೆಸರು - ನವೀನ.
ತಂದೆಯ ಹೆಸರು - ಸುರೇಶ.
ವಯಸ್ಸುಃ - 19 ವರ್ಷ,
ಉದ್ಯೋಗ - ವಿದ್ಯಾರ್ಥಿ.
ವಾಸಃ - ಕಾಗೋಡು ಗ್ರಾಮ,
ಸಾಗರ ತಾಲ್ಲೂಕು,
ಶಿವಮೊಗ್ಗ.

2 ನೇ ಆರೋಪಿತನ ಹೆಸರು - ಶರವಣಕುಮಾರ್.
ತಂದೆಯ ಹೆಸರು - ಮಲ್ಲಪ್ಪ.
ವಯಸ್ಸುಃ - 21 ವರ್ಷ,
ಉದ್ಯೋಗ - ಮೇಸ್ತ್ರಿ.
ವಾಸಃ - ಕಾಗೋಡು ಗ್ರಾಮ,
ಸಾಗರ ತಾಲ್ಲೂಕು,
ಶಿವಮೊಗ್ಗ.

3 ನೇ ಆರೋಪಿತನ ಹೆಸರು - ಸುರೇಶ.
ತಂದೆಯ ಹೆಸರು - ಗಣಪತಿ.
ವಯಸ್ಸುಃ - 45 ವರ್ಷ,
ಉದ್ಯೋಗ - ಕಾರ್ಮಿಕ.
ವಾಸಃ - ಕಾಗೋಡು ಗ್ರಾಮ,
ಸಾಗರ ತಾಲ್ಲೂಕು,
ಶಿವಮೊಗ್ಗ.

4 ನೇ ಆರೋಪಿತನ ಹೆಸರು - ಬೀರಪ್ಪ.
ತಂದೆಯ ಹೆಸರು - ಗಣಪತಿ.
ವಯಸ್ಸುಃ - 33 ವರ್ಷ,
ಉದ್ಯೋಗ - ಕಾರ್ಮಿಕ.
ವಾಸಃ - ಕಾಗೋಡು ಗ್ರಾಮ,

ಸಾಗರ ತಾಲ್ಲೂಕು,
ಶಿವಮೊಗ್ಗ.

# ದೋಷಾರೋಪಣೆ

ಸಾಗರದ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಧೀಶರಾದ ಚಾಂದಿನಿ ಜಿ.ಯು., ಬಿ.ಎ.ಎಲ್ಎಲ್.ಬಿ., ಆದ ನಾನು ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪಣೆ ಹೊರಿಸುತ್ತೇನೆ.

ದಿನಾಂಕ: **27.01.2021** ರಂದು ರಾತ್ರಿ **07.30** ಗಂಟೆಯ ಸಮಯದಲ್ಲಿ ಸಾಗರ ತಾಲ್ಲೂಕು, ಸಾಗರ ಗ್ರಾಮಾಂತರ ಪೊಲೀಸ ಠಾಣೆಯ ವ್ಯಾಪ್ತಿಯ ಕಾಗೋಡು ಗ್ರಾಮದ ಕನ್ನಪ್ಪ ರವರ ಮನೆ ಎದುರು ರಸ್ತೆಯಲ್ಲಿ ಸಾಕ್ಷಿ-**1** ರವರು ಗ್ರಾಮದ ದೇವಸ್ಥಾನದ ಹತ್ತಿರ ನಡೆಯುತ್ತಿರುವ ಮೀಟಿಂಗಿಗೆ ಹೋಗುತ್ತಿದ್ದಾಗ, ಆರೋಪಿತರು ಗ್ರಾಮ ಪಂಚಾಯ್ತಿ ಚುನಾವಣೆ ದ್ವೇಷದ ಹಿನ್ನೆಲೆಯಲ್ಲಿ ಸಾಕ್ಷಿ-**1** ರವರನ್ನು ಅಡ್ಡಗಟ್ಟಿ ತಡೆದು ನಿಲ್ಲಿಸಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***341*** ಸಹವಾಚಕ ಕಲಂ *34* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಎರಡನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಸಾಕ್ಷಿ-***1*** ರವರಿಗೆ ಅವಾಚ್ಯ ಶಬ್ದಗಳಿಂದ ಬೈದು, ಸಾಕ್ಷಿ-***2*** ರವರಿಗೆ ***1*** ನೇ ಆರೋಪಿತನು ಹೊಡೆಯುತ್ತಿರುವಾಗ ಬಿಡಿಸಲು ಬಂದ ಸಾಕ್ಷಿ-***3*** ರವರಿಗೆ ***1*** ನೇ ಆರೋಪಿತನು ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***504*** ಸಹವಾಚಕ ಕಲಂ *34* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಮೂರನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ***1*** ನೇ ಆರೋಪಿತನಾದ ನೀವು ಸಾಕ್ಷಿ-***1*** ರವರಿಗೆ ಕೈಗಳಿಂದ ಬೆನ್ನಿಗೆ ಗುದ್ದಿದ್ದು, ***2*** ನೇ ಆರೋಪಿಯು ಸಾಕ್ಷಿ-***1*** ರವರಿಗೆ ಹಿಡಿದುಕೊಂಡಿದ್ದು, ***3*** ಮತ್ತು ***4*** ನೇ ಆರೋಪಿತರು ಕಾಲನಿಂದ ಸಾಕ್ಷಿ-***1*** ರವರಿಗೆ ಒದ್ದು, ಕೈಯಿಂದ ಮೈ-ಕೈ ಮೇಲೆ ಹೊಡೆದು, ಬಿಡಿಸಲು ಬಂದ ಸಾಕ್ಷಿ-***2*** ರವರಿಗೆ ***1*** ನೇ ಆರೋಪಿತನು ಕೈಯಿಂದ ತಳ್ಳಿ ಬೀಳಿಸಿ, ಸಾಕ್ಷಿ-***1*** ಮತ್ತು ***2***

ರವರಿಗೆ ನೋವುಂಟು ಮಾಡಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***323*** ಸಹವಾಚಕ ಕಲಂ *34* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ನಾಲ್ಕನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ***1*** ನೇ ಆರೋಪಿತನಾದ ನೀವು ಸಾಕ್ಷಿ-***1*** ರವರಿಗೆ ದೊಣ್ಣೆಯಿಂದ ಹೊಡೆದು ಸಾಕ್ಷಿ-***1*** ರವರಿಗೆ ಸಾಮಾನ್ಯ ಸ್ವರೂಪದ ಗಾಯವನ್ನುಂಟು ಮಾಡಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***324*** ಸಹವಾಚಕ ಕಲಂ *34* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಕೊನೇಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ***1*** ನೇ ಆರೋಪಿತನಾದ ನೀವು ಸಾಕ್ಷಿ-***1*** ಮತ್ತು ***2*** ರವರಿಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿ, ಆ ಮೂಲಕ ನೀವು ಭಾರತೀಯ ದಂಡ ಸಂಹಿತೆ ಕಲಂ ***506*** ಸಹವಾಚಕ ಕಲಂ *34* ರಡಿಯಲ್ಲಿ ಅಪರಾಧವೆಸಗಿದ್ದು, ಇದು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಇದೆ.

ಆದ್ದರಿಂದ ನಿಮ್ಮ ಮೇಲೆ ಮುಂದಿನ ಕೇಸು ನಡೆಸುವಂತೆ ನಿರ್ದೇಶಿಸಿದೆ.

ದಿನಾಂಕಃ 17.02.2026.

**(ಚಾಂದಿನಿ ಜಿ.ಯು.)**
ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ. 2279/2021

ಆರೋಪಿಯ ಹೇಳಿಕೆ

1 ನೇ ಆರೋಪಿಯ ಹೆಸರುಃ ನವೀನ ತಂದೆ ಸುರೇಶ.

ಪ್ರ.1- ನಿಮಗೆ ಈ ಕೇಸಿನಲ್ಲಿ ಮಾಡಿರುವ ಆರೋಪಣೆಯನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಲಾಗಿದ್ದು, ಮನವರಿಕೆಯಾಯಿತೇ?

ಉತ್ತರಃ-

ಪ್ರ.2- ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ-

(ದಿಃ 17.02.2026 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

(ಚಾಂದಿನಿ ಜಿ.ಯು.)
ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ. 2279/2021

ಆರೋಪಿಯ ಹೇಳಿಕೆ

2 ನೇ ಆರೋಪಿಯ ಹೆಸರುಃ ಶರವಣಕುಮಾರ್ ಬಿನ್ ಮಲ್ಲಪ್ಪ.

ಪ್ರ.1- ನಿಮಗೆ ಈ ಕೇಸಿನಲ್ಲಿ ಮಾಡಿರುವ ಆರೋಪಣೆಯನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಲಾಗಿದ್ದು, ಮನವರಿಕೆಯಾಯಿತೇ?

ಉತ್ತರಃ-

ಪ್ರ.2- ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ-

(ದಿಃ 17.02.2026 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

(ಚಾಂದಿನಿ ಜಿ.ಯು.)
ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ. 2279/2021

ಆರೋಪಿಯ ಹೇಳಿಕೆ

3 ನೇ ಆರೋಪಿಯ ಹೆಸರುಃ ಸುರೇಶ ಬಿನ್ ಗಣಪತಿ.

ಪ್ರ.1- ನಿಮಗೆ ಈ ಕೇಸಿನಲ್ಲಿ ಮಾಡಿರುವ ಆರೋಪಣೆಯನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಲಾಗಿದ್ದು, ಮನವರಿಕೆಯಾಯಿತೇ?

ಉತ್ತರಃ-

ಪ್ರ.2- ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ-

(ದಿಃ 17.02.2026 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

(ಚಾಂದಿನಿ ಜಿ.ಯು.)
ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.

**ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯದಲ್ಲಿ ಸಾಗರ.**

ಸಿ.ಸಿ. ನಂ. 2279/2021

ಆರೋಪಿಯ ಹೇಳಿಕೆ

4 ನೇ ಆರೋಪಿಯ ಹೆಸರುಃ ಬೀರಪ್ಪ ಬಿನ್ ಗಣಪತಿ.

ಪ್ರ.1- ನಿಮಗೆ ಈ ಕೇಸಿನಲ್ಲಿ ಮಾಡಿರುವ ಆರೋಪಣೆಯನ್ನು ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ವಿವರಿಸಲಾಗಿದ್ದು, ಮನವರಿಕೆಯಾಯಿತೇ?

ಉತ್ತರಃ-

ಪ್ರ.2- ನೀವು ತಪ್ಪನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕಾ?

ಉತ್ತರಃ-

(ದಿಃ 17.02.2026 ರಂದು ಆರೋಪಿಯಿಂದ ನೀಡಲ್ಪಟ್ಟಿದೆ ಎಂದು ಪ್ರಮಾಣಿಕರಿಸಿದೆ).

(ಚಾಂದಿನಿ ಜಿ.ಯು.)
ಒಂದನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಸಾಗರ.